
CELEBRATING 40 YEARS IN EYE CARE

NARAYANA NETHRALAYA
your faith shall heal you




# ಯುವೈಟಿಸ್

THE BEST EYE HOSPITAL IN KARNATAKA
RANKED #1 FOR MORE THAN A DECADE

## ಯುವೈಟಿಸ್ ಎಂದರೇನು?

ಯುವಿಯಾ ಎನ್ನುವುದು ಕಣ್ಣಿನ ಮಧ್ಯಭಾಗದ ಪದರದಲ್ಲಿದ್ದೂ ಇದು ಕಣ್ಣಿನ ಪಾಪೆ, ಸಿಲಿಯರಿ ಬಾಡಿ ಮತ್ತು ಕೊರಾಯ್ಡ್ ಭಾಗಗಳನ್ನು ಒಳಗೊಂಡಿದೆ. ಈ ಭಾಗಗಳಲ್ಲಿ ನೋವು, ಕೆಂಪಾಗುವಿಕೆ, ಉರಿಊತಗಳು ಕಂಡು ಬಂದರೆ ಯುವೈಟಿಸ್ ಎನ್ನುವರು.



## ಯುವೈಟಿಸ್ ಗುಣಲಕ್ಷಣಗಳೇನು?

ಯಾರಲ್ಲಿ ಹೆಚ್ಚಾಗಿ ಕಣ್ಣು ಕೆಂಪಾಗಿರುವುದು, ನೋವಾಗುವುದು, ನೀರು ಸೋರುವಿಕೆ, ಪ್ರಕಾಶಮಾನವಾದ ಬೆಳಕನ್ನು ನೋಡಲು ಆಗುವುದಿಲ್ಲ. ಕಪ್ಪು ಚುಕ್ಕಿಗಳು ಕಾಣಿಸಿದಂತಾಗುವುದು ಹಾಗೂ ದೃಷ್ಟಿ ಕಡಿಮೆಯಾಗುವುದು ಯುವೈಟಿಸ್‌ನ ಲಕ್ಷಣವಾಗಿದೆ.

ಕೆಲವು ರೋಗಿಗಳಿಗೆ ಕಾರಣವಿಲ್ಲದೆ ಬರಬಹುದು. (ಉದಾ: ಪೆರಿಫೆರಾಲ್ ರೆಟಿನಾ ವ್ಯಾಕ್ಯೂಸ್ಲೈಟಿಸ್, ಫ್ಯೂಕ್ಸ್ ಯುವೈಟಿಸ್).

## ಯುವೈಟಿಸ್ ಬರಲು ಕಾರಣಗಳೇನು?

ದೇಹದಲ್ಲಿ ಉತ್ಪತ್ತಿಯಾಗುವಂತಹ ಸ್ವಯಂ ರೋಗನಿರೋಧಕಗಳು ಕಡಿಮೆಯಾದಾಗ ಬ್ಯಾಕ್ಟೀರಿಯಾ, ಫಂಗೈ, ವೈರಸ್, ಪ್ಯಾರಸೈಟ್ ಸೋಂಕುಗಳು ಪ್ರಾರಂಭವಾದಾಗ ಯುವೈಟಿಸ್ ಬರಬಹುದು. ಕೆಲವು ರೋಗಿಗಳಿಗೆ ದೇಹದ ಯಾವುದೇ ಭಾಗದಲ್ಲಾದರೂ ಸಹ ಬರಬಹುದು. ಕೆಲವೊಮ್ಮೆ ಕಣ್ಣಿಗೆ ನೇರವಾಗಿ ಸೋಂಕಾಗಬಹುದು. (ಉದಾ: ಕ್ಷಯ ಮತ್ತು ಟ್ಯಾಕ್ಸೊಪ್ಲಾಸ್ಮೊಸಿಸ್)

## ಯುವೈಟಿಸ್‌ನ ವಿಧಗಳು ಯಾವುವು?


**ಯುವಿಯಾ ಒಳಗೊಂಡಿರುವ ಭಾಗಗಳ ಆಧಾರದ ಮೇಲೆ, ಯುವೈಟಿಸ್ ಅನ್ನು**

**ಆ್ಯಂಟಿರಿಯರ್ (ಐರಿಸ್(ಪಾಪೆ) ಒಳಗೊಂಡಿರುತ್ತದೆ)**

**ಇಂಟರ್ ಮಿಡಿಯಟ್: (ಸಿಲಿಯರಿ ಬಾಡಿ, ವಿಟ್ರಿಯಸ್ ಮತ್ತು ಪಾರ್ಸ್ ಪ್ಲಾನ ಒಳಗೊಂಡಿರುತ್ತದೆ)**

**ಪೋಸ್ಟಿರಿಯರ್ (ರೆಟಿನಾ ಅಥವಾ ಕೊರಾಯ್ಡ್‌ಗಳಲ್ಲಿ ಒಳಗೊಂಡಿರುತ್ತದೆ)**

**ಪ್ಯಾನ್ ಯುವೈಟಿಸ್: (ಎಲ್ಲಾ ಭಾಗಗಳು ಒಳಗೊಂಡಿರುತ್ತದೆ)**




## ಯುವೈಟಿಸ್ ರೋಗಿಗಳಿಗೆ ಯಾವ ರೀತಿಯ ಪರೀಕ್ಷೆಗಳ ಅಗತ್ಯವಿದೆ?

ಯುವೈಟಿಸ್ ರೋಗಿಗಳಿಗೆ ಎಫ್.ಎಫ್.ಎ, ಒ.ಸಿ.ಟಿ, ಬಿ–ಸ್ಕ್ಯಾನ್ ಪರೀಕ್ಷೆಗಳ ಅಗತ್ಯವಿರುತ್ತದೆ. ಎಫ್.ಎಫ್.ಎ ಪರೀಕ್ಷೆಗೆ ಒಳಪಡುವ ರೋಗಿಯು 3 ಗಂಟೆಗಳ ಕಾಲ ಖಾಲಿ ಹೊಟ್ಟೆಯಲ್ಲಿರಬೇಕು ಹಾಗೂ ಜೊತೆಯಲ್ಲಿ ಒಬ್ಬ ಸಹಾಯಕರನ್ನು ಕರೆದುಕೊಂಡು ಬಂದಿರಬೇಕು ಒ.ಸಿ.ಟಿ ಮತ್ತು ಬಿ–ಸ್ಕ್ಯಾನ್ ಮಾಡಿಸುವುದರ ಮೂಲಕ ಕಣ್ಣಿನಲ್ಲಾಗುವ ಬದಲಾವಣೆಗಳನ್ನು ಗುರುತಿಸಬಹುದು.

## ಯುವೈಟಿಸ್ ರೋಗಿಗಳು ಯಾವ ರೀತಿಯ ಪರೀಕ್ಷೆಗಳಿಗೆ ಒಳಗಾಗ ಬೇಕಾಗುತ್ತದೆ?

ರೋಗಿಗಳನ್ನು ಕ್ರಮಬದ್ಧವಾಗಿ ಉತ್ತಮ ಪರೀಕ್ಷೆಗಳಿಗೆ ಒಳಪಡಿಸುವುದರ ಮೂಲಕ ಸೂಕ್ತ ಚಿಕಿತ್ಸೆಯನ್ನು ನೀಡಲಾಗುತ್ತದೆ. ಅವುಗಳೆಂದರೆ ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ಚರ್ಮದ ಪರೀಕ್ಷೆ, ಎಕ್ಸ್‌ರೇ ಹಾಗೂ ಕಣ್ಣಿನಲ್ಲಿರುವ ದ್ರವ್ಯವನ್ನು ಸಹ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

## ಯುವೈಟಿಸ್ ಚಿಕಿತ್ಸೆಯಲ್ಲಿ ಬಳಸಲಾಗುವ ಔಷಧದ ಅಡ್ಡ ಪರಿಣಾಮಗಳು ಯಾವುವು?

ಯುವೈಟಿಸ್‌ಗೆ ಔಷಧಿಗಳನ್ನು ಯಾವಾಗಲೂ ವೈದ್ಯರ ಸೂಚನೆಯ ಮೇಲೆ ತೆಗೆದುಕೊಳ್ಳಬೇಕು. ಈ ಔಷಧಿಗಳನ್ನು ನಿಮಗಿಷ್ಟ ಬಂದಂತೆ ಸೇವಿಸುವುದು ಹಾಗೂ ನಿಲ್ಲಿಸುವುದು ಸರಿಯಲ್ಲ. ಟಾಪಿಕಲ್ ಸ್ಟಿರಾಯ್ಡ್ ನಿಮಗೆ ಕಣ್ಣಿನಲ್ಲಿ ಪೊರೆ ಬರುವುದು, ಕಣ್ಣಿನ ಒತ್ತಡವನ್ನು (ಗ್ಲಾಕೋಮಾ) ಹೆಚ್ಚು ಮಾಡುತ್ತದೆ. ಸ್ಟಿರಾಯ್ಡ್ ಮಾತ್ರೆಗಳು ಆಸಿಡಿಟಿ, ತೂಕ ಹೆಚ್ಚಾಗುವುದು, ಸಕ್ಕರೆ ಕಾಯಿಲೆ ಬರುವುದು, ಚರ್ಮದ ಕಾಯಿಲೆ, ಆಸ್ಟಿಯೋಪೊರೊಸಿಸ್, ನಿರುತ್ಸಾಹವನ್ನು ಉಂಟು ಮಾಡಬಹುದು.
ಇಮ್ಯೂನೊಮಾಡಿಲೇಟರ್, ಬೊನ್‌ಮ್ಯಾರೋ ತೊಂದರೆಯುಂಟು ಮಾಡಿ ಬಿಳಿರಕ್ತ ಕಣಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ. ಕೆಲವು ಔಷಧಿಗಳು ಬಾಯಿಯ ಹುಣ್ಣು, ಅಪರೂಪದ ಬಂಜೆತನ ಮತ್ತು ಲಿವರ್ (ಯಕೃತ್) ಕಾರ್ಯನಿರ್ವಹಿಸುವುದು ಕಡಿಮೆ ಮಾಡುತ್ತದೆ. ಆದುದರಿಂದ ಈ ಔಷಧಿಗಳನ್ನು ಬಳಸುವಾಗ ರಕ್ತ ಪರೀಕ್ಷೆ ಹಾಗೂ ಲಿವರ್ ಪರೀಕ್ಷೆಗಳನ್ನು ಮಾಡಿಸುವ ಅಗತ್ಯವಿರುತ್ತದೆ ಎಂದು ವೈದ್ಯರು ಸಲಹೆ ನೀಡುತ್ತಾರೆ.

ಮಹಿಳೆಯರು ಇಮ್ಯೂನೊಮಾಡಿಲೇಟರ್/ಸ್ಟಿರಾಯ್ಡ್ ನೊಂದಿಗೆ ಚಿಕಿತ್ಸೆಗೆ ಒಳಗಾಗಿದ್ದಾಗ ಗರ್ಭಧರಿಸಬಾರದೆಂದು ಸೂಚಿಸಲಾಗುತ್ತದೆ. ನೀವು ಗರ್ಭಧರಿಸಲು ನಿರ್ಧರಿಸಿದರೆ ಔಷಧಿಗಳಲ್ಲಿ ಬದಲಾವಣೆಗಳ ಅಗತ್ಯವಿರಬಹುದು. ಈ ಚಿಕಿತ್ಸೆ ಪಡೆಯುವಾಗ ಯಾವುದೇ ರೀತಿಯ ಸೋಂಕು ತಗಲಿದರೂ ಕೂಡಲೆ ವೈದ್ಯರನ್ನು ಸಂಪರ್ಕಿಸಿ ಆ್ಯಂಟಿಬಯೋಟಿಕ್ ಔಷಧಿಗಳನ್ನು ತೆಗೆದುಕೊಳ್ಳಬೇಕು. ಮತ್ತು ಈ ಚಿಕಿತ್ಸೆಯ ವೇಳೆ ಯಾವುದಾದರೂ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾದಾಗ ನಿಮ್ಮ ವೈದ್ಯರ ಸಲಹೆ ಪಡೆಯುವುದು ಉತ್ತಮ.

## ಯುವೈಟಿಸ್ ರೋಗಕ್ಕೆ ಹೇಗೆ ಚಿಕಿತ್ಸೆ ನೀಡಲಾಗುತ್ತದೆ?

ಯುವೈಟಿಸ್ ರೋಗಕ್ಕೆ ಸ್ಟಿರಾಯ್ಡ್ ಔಷಧಿಗಳೇ ಮೂಲಾಧಾರವಾಗಿದೆ. ಈ ರೋಗ ಇರುವ ಭಾಗ ಹಾಗೂ ತೀವ್ರತೆಗೆ ಅನುಗುಣವಾಗಿ ಕಣ್ಣಿನ ಔಷಧಿ (ಡ್ರಾಪ್ಸ್), ಮುಲಾಮು, ಚುಚ್ಚುಮದ್ದು ಹಾಗೂ ಮಾತ್ರೆಗಳನ್ನು ನೀಡುವುದರ ಮೂಲಕ ಚಿಕಿತ್ಸೆ ಮಾಡಲಾಗುತ್ತದೆ. ಆ್ಯಂಟಿರಿಯರ್ ಮತ್ತು ಇಂಟರ್ ಮಿಡಿಯಟ್ ಯುವೈಟಿಸ್ ರೋಗಿಗಳಿಗೆ ಟಾಪಿಕಲ್ ಸ್ಟಿರಾಯ್ಡ್ ಹಾಗೂ ಡೈಲಟೇಷನ್ ಡ್ರಾಪ್ಸ್‌ಗಳನ್ನು ನೀಡುವ ಮೂಲಕ ಇರುವ ನೋವನ್ನು ಕಡಿಮೆ ಮಾಡುತ್ತೇವೆ. ಈ ಔಷಧಿಗಳನ್ನು ರೋಗಿಗಳು ಸಂಪೂರ್ಣವಾಗಿ ಗುಣಮುಖವಾಗುವವರೆಗೂ ಉಪಯೋಗಿಸಬೇಕು. ಈ ಔಷಧಿ ಎಷ್ಟು ಪ್ರಮಾಣದಲ್ಲಿ ಹಾಗೂ ಎಷ್ಟು ದಿನದವರೆಗೆ ತೆಗೆದುಕೊಳ್ಳಬೇಕೆಂಬುದನ್ನು ರೋಗದ ತೀವ್ರತೆಯ ಆಧಾರದ ಮೇಲೆ ತಜ್ಞರು ತಿಳಿಸುತ್ತಾರೆ. ಇಂಟರ್‌ಮಿಡಿಯಟ್ ಯುವೈಟಿಸ್ ಇರುವ ರೋಗಿಗಳಿಗೆ ಪೆರಿಯಾಕುಲರ್ ಸ್ಟಿರಾಯ್ಡ್ ಚುಚ್ಚುಮದ್ದನ್ನು ನೀಡಲಾಗುತ್ತದೆ. ಇದರ ಪರಿಣಾಮವಾಗಿ ಔಷಧಿಯು ಕ್ರಮೇಣವಾಗಿ 3 ರಿಂದ 4 ವಾರಗಳವರೆಗೂ ಕೆಲಸ ನಿರ್ವಹಿಸುತ್ತದೆ. ದೀರ್ಘಕಾಲ ಕೆಲಸ ಮಾಡುವ ಸ್ಟಿರಾಯ್ಡ್‌ಗಳನ್ನು ನೀಡಲಾಗುತ್ತದೆ. ಇದು ಹೆಚ್ಚು ಕಾಲದವರೆಗೆ ಕೆಲಸ ಮಾಡುತ್ತದೆ.

ಪೊಸ್ಟಿರಿಯರ್ ಅಥವಾ ಫ್ಯಾನ್ ಯುವೈಟಿಸ್ ರೋಗಿಗಳಿಗೆ ಸಾಮಾನ್ಯವಾಗಿ ಸೇವಿಸುವ ಸ್ಟಿರಾಯ್ಡ್ ಔಷಧಿಗಳನ್ನು ಮತ್ತು ಚುಚ್ಚುಮದ್ದನ್ನು ಸೂಚಿಸಲಾಗುತ್ತದೆ. ಯುವೈಟಿಸ್ ಚಿಕಿತ್ಸೆಯಲ್ಲಿ ಸ್ಟಿರಾಯ್ಡ್‌ಗಳಲ್ಲದೆ ಇಮ್ಯುನೊಮಾಡ್ಯುಲೇಟರಿ ಏಜೆಂಟ್‌ಗಳನ್ನು ನೀಡಲಾಗುತ್ತದೆ. ಇದನ್ನು ಸ್ಟಿರಾಯ್ಡ್ ತಡೆದುಕೊಳ್ಳಲಾಗದಿರುವ ರೋಗಿಗಳಲ್ಲಿ ಸೊಂಕು ನಿವಾರಿಸಲು ಇತರ ಔಷಧಿಗಳನ್ನು ನೀಡುತ್ತಾರೆ. ಇಮ್ಯುನೊಮಾಡ್ಯುಲೇಟರಿ ಏಜೆಂಟ್‌ಗಳನ್ನು ವಿಶೇಷವಾಗಿ ಸ್ಟೀರಾಯ್ಡ್‌ಗಳಿಗೆ ಅಸಹಿಷ್ಣುತೆ ಹೊಂದಿರುವ ರೋಗಿಗಳಿಗೆ ಮೀಸಲಿಡಲಾಗಿದೆ, ಕೇವಲ ಸ್ಟೀರಾಯ್ಡ್‌ಗಳೊಂದಿಗೆ ಉರಿಯೂತವನ್ನು ಪರಿಹರಿಸುವುದಿಲ್ಲ ಮತ್ತು ಸಂಧಿವಾತ ಮತ್ತು ವಿಕೆಎಚ್ ನಂತಹ ಗಂಭೀರ ಆಕ್ಯುಲರ್ ಪರಿಸ್ಥಿತಿಗಳಂತಹ ಕೆಲವು ವ್ಯವಸ್ಥಿತ ಪರಿಸ್ಥಿತಿಗಳನ್ನು ಹೊಂದಿರುವ ರೋಗಿಗಳಿಗೆ ನೀಡಲಾಗುತ್ತದೆ. ಸಾಮಾನ್ಯವಾಗಿ ಬಳಸುವ ಇಮ್ಯುನೊಮಾಡ್ಯುಲೇಟರಿಗಳೆಂದರೆ ಮಿಥೊಟ್ರೆಕ್ಸಟ್ ಅಜಥಿಯೋಪ್ರಿನ್, ಸೈಕ್ಲೊಸ್ಪೊರಿನ್, ಮೈಕೊಫೆನೊಲೆಟ್ ಮೊಫೆಟಿಲ್ ಸೈಕ್ಲೊಫಾಸ್ಪಮೈಡ್ ಮತ್ತು ಬಯೊಲೊಜಿಕಲ್ ಏಜೆಂಟ್‌ಗಳು. ಯುವೆಟಿಸ್ ಸಾಂಕ್ರಾಮಿಕ ಕೀಟಾಣುಗಳಿಂದ ಉಂಟಾಗುವ ಸಂದರ್ಭಗಳಲ್ಲಿ (ಬ್ಯಾಕ್ಟೀರಿಯಾ, ಶಿಲೀಂಧ್ರಗಳು, ವೈರಸ್‌ಗಳು), ಕಣ್ಣಿನ ಹನಿಗಳು, ಮಾತ್ರೆಗಳು ಅಥವಾ ಚುಚ್ಚುಮದ್ದಿನ ರೂಪದಲ್ಲಿ ಆ್ಯಂಟಿಮೈಕ್ರೊಬಿಯಲ್ ಚಿಕಿತ್ಸೆಯು ಅಗತ್ಯವಾಗಿರುತ್ತದೆ.

## ಯುವೈಟಿಸ್ ಚಿಕಿತ್ಸೆಯ ನಂತರವು ಸಹ ಪುನಃ ಬರುತ್ತದೆಯೇ?

ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ ಎಂದರೆ ಯುವೈಟಿಸ್ ಎಂಬುದು ಪುನಃ ಬರುವಂತಹ ಕಾಯಿಲೆಯಾಗಿದೆ. ಆದ್ದರಿಂದ ದೀರ್ಘಕಾಲದವರೆಗೆ ಹಾಗೂ ಸಮಯಕ್ಕೆ ಸರಿಯಾಗಿ ವೈದ್ಯರನ್ನು ಭೇಟಿ ಮಾಡಬೇಕು. ಯುವೈಟಿಸ್ ತೊಂದರೆ ಪುನರಾವರ್ತನೆಯಾದರೆ ತಕ್ಷಣ ನಿಮ್ಮ ನೇತ್ರತಜ್ಞರನ್ನು ಭೇಟಿಯಾಗಬೇಕು. ಸರಿಯಾದ ಸಮಯದಲ್ಲಿ ಚಿಕಿತ್ಸೆ ಪಡೆದರೆ ಬೇಗ ಹಾಗೂ ಉತ್ತಮವಾಗಿ ಗುಣಮುಖರಾಗುತ್ತಾರೆ.

ಯುವೈಟಿಸ್‌ನ ತೊಡಕುಗಳನ್ನು ತಡೆಗಟ್ಟಲು ಚಿಕಿತ್ಸೆ ಮತ್ತು ಅನುಸರಣಾ ಭೇಟಿಗಳು ನಿರ್ಣಾಯಕವಾಗಿದೆ.

# ಯುವೈಟಿಸ್

## ದೂರವಾಣಿ ಸಂಖ್ಯೆ: 91–80–66121455

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು
ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು
ಇಲ್ಲಿ ಸ್ಕ್ಯಾನ್ ಮಾಡಿ


**ಎನ್.ಎನ್–1**

#121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ಟೆಲಿಫೋನ್:+91–80–66121643
Email - infonn1@narayananethralaya.com

**ಎನ್.ಎನ್–2**

ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ,
ಬೆಂಗಳೂರು–560099, ಭಾರತ
ಟೆಲಿಫೋನ್: +91–80–66660655–0658
Email - infonn2@narayananethralaya.com

**ಎನ್.ಎನ್–3**

#1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91–80–66974000/01/02
Email - infonn3@narayananethralaya.com

**ಎನ್.ಎನ್–4**

#63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು, ಬೆಂಗಳೂರು–560076, ಭಾರತ
ಟೆಲಿಫೋನ್: 080–66121618–1619, +91–9513522400,
+91–9538822400
Email - infonn4@narayananethralaya.com

Nnethralaya

www.narayananethralaya.org